# ಉತ್ಕೃಷ್ಟ ಕಲಾವಿದ : ಶ್ರೀರಾಮಕೃಷ್ಣ

ಕೆ.ಬಿ. ಪ್ರಭುಪ್ರಸಾದ್

*ಕಲಾತ್ಮಕತೆ ಶ್ರೀರಾಮಕೃಷ್ಣರ ವ್ಯಕ್ತಿತ್ವದಲ್ಲಿ ತನ್ನ ಶ್ರೇಷ್ಠತೆಯನ್ನು ಪಡೆದಿತ್ತು. ಅವರ ವ್ಯಕ್ತಿತ್ವದಲ್ಲಿ ಅಂತರ್ಗತವಾಗಿದ್ದ ಕಲಾವಿದನ ಹಲವು ಮುಖಗಳನ್ನು ಪರಿಚಯಿಸುವ ಈ ಲೇಖನ, ಹೆಸರಾಂತ ಸಾಹಿತಿಗಳೂ, ಚಿಂತಕರೂ ಆದ ಶ್ರೀಯುತ ಕೆ.ಬಿ. ಪ್ರಭುಪ್ರಸಾದರು ಮೈಸೂರು ಆಶ್ರಮದ ವಾರ್ಷಿಕೋತ್ಸವದಲ್ಲಿ ನೀಡಿದ ಉಪನ್ಯಾಸವನ್ನು ಆಧರಿಸಿದೆ.*

ಶ್ರೀರಾಮಕೃಷ್ಣ ಪರಮಹಂಸರು ಭಕ್ತಿ, ಜ್ಞಾನ, ಕರ್ಮ, ಯೋಗ ಸಾಧನಾಮಾರ್ಗಗಳಲ್ಲಿ ಅರಿವು—ಅನುಭವಗಳನ್ನು ನೀಡಲೆಂದೇ ಭುವಿಗವತರಿಸಿದ ಭಗವಚ್ಚೇತನ. ಜಗತ್ತಿನ ಮುಖ್ಯವಾದ ಎಲ್ಲ ಮತಧರ್ಮಗಳೂ ಮಾನವ ಜೀವಿತದ ಪರಮಗಂತವ್ಯವಾದ ಅದೇ—ಏಕೈಕ—ಸತ್ಯದೆಡೆಗೆ ಕರೆದೊಯ್ಯುವ ಬೇರೆ ಬೇರೆ ಪಥಗಳು. ಗುರಿ ಒಂದೇ, ದಾರಿಗಳು ಹಲವು ಎಂಬುದನ್ನು ಸ್ವತಃ ಸಾಧನೆಮಾಡಿ ಕಂಡುಕೊಂಡು ಸರ್ವಧರ್ಮಸಮನ್ವಯವನ್ನು ಲೋಕಕ್ಕೆಲ್ಲ ಸಾರಿದ ಆಚಾರ್ಯ ಪುರುಷರು. ಹಂಬಲಿಸಿ ಬರುವ ಎಲ್ಲರಿಗೂ, ಮತ್ತು ಯಾರಿಗಾದರೂ ಪ್ರೀತಿಯಿಂದ ಮಾರ್ಗದರ್ಶನ ನೀಡುವ ಪರಮಸದ್ಗುರು.

ಶ್ರೀರಾಮಕೃಷ್ಣರು ತಮ್ಮ ತಾರುಣ್ಯದಲ್ಲಿ ಗದಾಧರನಾಗಿ ಕೊಲ್ಕತಾ ಬಳಿಯ ದಕ್ಷಿಣೇಶ್ವರದಲ್ಲಿ ರಾಣಿ ರಾಸಮಣಿ ಎಂಬ ಭಕ್ತೆ ಕಟ್ಟಿಸಿದ ಮಹಾಕಾಳಿಕಾ ದೇಗುಲದಲ್ಲಿ ಅರ್ಚಕರಾಗಿದ್ದರು, ಉತ್ಕಟವಾದ ಭಕ್ತಿಸಾಧನೆಯಿಂದ ಜಗನ್ಮಾತೆಯ ಸಾಕ್ಷಾತ್ ದರ್ಶನವನ್ನು ಪಡೆದರು ಎಂಬುದು ಎಲ್ಲರಿಗೂ ಗೊತ್ತು. ಅವರೊಬ್ಬ ಶ್ರೇಷ್ಠಭಕ್ತರಾಗಿ, ಪ್ರಚಂಡ ಸಾಧಕರಾಗಿ, ಸದ್ಗುರುವಾಗಿ, ದೇವಮಾನವರೆನಿಸಿ, ಭಗವದವತಾರವೇ ಎಂದು ಗುರುತಿಸಲ್ಪಟ್ಟವರು. ಇದು ಸುಪ್ರಕಟಿತವಾದ ವಿಚಾರ. ಆದರೆ ಅವರ ವ್ಯಕ್ತಿತ್ವದಲ್ಲಿ ಮಹಾಕಲೋಪಾಸಕನೂ, ಉತ್ಕೃಷ್ಟ ಕಲಾವಿದನೂ ಗುಪ್ತವಾಗಿ, ಅವ್ಯಕ್ತವಾಗಿದ್ದು ಅವರ ಜೀವನದ ಕೆಲವು ಸಂದರ್ಭಗಳಲ್ಲಿ, ನಡೆ-ನುಡಿಗಳಲ್ಲಿ ಆಗಾಗ ಪ್ರಕಟವಾಗುತ್ತಿದ್ದುದನ್ನು ಸಾಮಾನ್ಯವಾಗಿ ಬಹಳ ಜನ  ಗಮನಿಸಿರಲಾರರು. ಅವರ ವ್ಯಕ್ತಿತ್ವದ ನಾನಾ ದಿವ್ಯ ಮುಖಗಳಲ್ಲಿ ಕಲಾ ಪ್ರಾವೀಣ್ಯವೂ ಒಂದು ಗಮನಾರ್ಹವಾದ ಸ್ವಾರಸ್ಯವಾದ ಮುಖ. ಅದನ್ನು ಗಮನಿಸಿ ಪರಿಭಾವಿಸಿದಾಗ ಅದೂ ಸಹ ಒಂದು ವಿಶೇಷವಾದ ಆನಂದವನ್ನುಂಟುಮಾಡುತ್ತದೆ.



ಉತ್ಕೃಷ್ಟ ಕಲಾವಿದರಾಗಿ ಶ್ರೀರಾಮಕೃಷ್ಣ ಪರಮಹಂಸರು ಎಲ್ಲರ ಮನವನ್ನೂ ಸೂರೆಗೊಳ್ಳುತ್ತಾರೆ, ಎಲ್ಲರ ಜೀವನದ ಆದರ್ಶವಾಗುತ್ತಾರೆ ಮತ್ತು ಎಲ್ಲರಿಗೂ ಅತ್ಯಂತ ಹೃದ್ಯರೂ ಆತ್ಮೀಯರೂ ಆಗುತ್ತಾರೆ.

ಶ್ರೀರಾಮಕೃಷ್ಣರ ಬದುಕಿನಲ್ಲಿ ಮತ್ತು ವ್ಯಕ್ತಿತ್ವದಲ್ಲಿ ಪ್ರಧಾನವಾದುದು ಮತ್ತು ಮುಖ್ಯವಾದುದು ಪರಮಾರ್ಥ, ನಿಜ. ಹಾಗೆಯೇ ದಿವ್ಯವಾದ ಸೌಂದರ್ಯಪ್ರಜ್ಞೆ ಹಾಗೂ ಭಾವ ಮಾಧುರ್ಯಗಳೂ ಅವರ ವ್ಯಕ್ತಿತ್ವದಲ್ಲಿ ಅಡಗಿದ್ದವು ಎಂಬುದೂ ಅಷ್ಟೇ ನಿಜ. ಹಾಗೆ ನೋಡಿದರೆ ಅವರ ಬದುಕೇ ಮಧುರವಾದ ಕಾವ್ಯ; ಸುಂದರವಾದ ಕಲಾಕೃತಿ. ಅವರ ಬಾಲ್ಯದಲ್ಲಿ ಆಗಾಗ ಪ್ರಕಟವಾಗುತ್ತಿದ್ದ ಒಳಗಣ ಕಲೋಪಾಸಕ, ಆತ್ಮಸಾಧನೆಯಲ್ಲಿ ವಿಕಾಸಗೊಂಡು, ಪರಿಪಾಕಗೊಂಡು, ಸಾಧನೆಗಳೆಲ್ಲ ಮುಗಿದು ಅವುಗಳ ಫಲವನ್ನು ಲೋಕಕ್ಕೆಲ್ಲ ಹಂಚುವ ಹಂತದಲ್ಲಿ, ಉತ್ಕೃಷ್ಟ ಕಲಾವಿದನಾಗಿ ಪ್ರಕಾಶಿಸುವುದನ್ನು ನಾವು ಗಮನಿಸಬಹುದು. ಭಕ್ತಿಪೂರ್ಣವಾದ ಗೀತ ಗಾಯಕರಾಗಿ, ಪ್ರಕೃತಿಸೌಂದರ್ಯದ ಎದುರು ಭಾವಪರವಶರಾದ ಕವಿಯಾಗಿ, ನಾಟಕದ ಪಾತ್ರದಲ್ಲಿ ತಾದಾತ್ಮ್ಯ ಹೊಂದಬಲ್ಲ ಅಭಿನಯ ವಿಶಾರದರಾಗಿ, ಸಹಜ ನರ್ತನ ಶೈಲಿಯ ನಾಟ್ಯ ಕಲಾವಿದರಾಗಿ, ಆರೋಗ್ಯಕರ ಹಾಸ್ಯಪ್ರಜ್ಞೆಯುಳ್ಳ ವಿನೋದಶೀಲರಾಗಿ, ಪಾರಮಾರ್ಥಿಕ-ವ್ಯಾವಹಾರಿಕ ಮನೋಧರ್ಮಗಳು ಸಮನ್ವಯಗೊಂಡ ಜೀವನಕಲೆಯನ್ನು ಸಾಧಿಸಿದ,

ಬೋಧಿಸಿದ ಉತ್ಕೃಷ್ಟ ಕಲಾವಿದರಾಗಿ ಶ್ರೀರಾಮಕೃಷ್ಣ ಪರಮಹಂಸರು ಎಲ್ಲರ ಮನವನ್ನೂ ಸೂರೆಗೊಳ್ಳುತ್ತಾರೆ, ಎಲ್ಲರ ಜೀವನದ ಆದರ್ಶವಾಗುತ್ತಾರೆ, ಮತ್ತು ಎಲ್ಲರಿಗೂ ಅತ್ಯಂತ ಹೃದ್ಯರೂ ಆತ್ಮೀಯರೂ ಆಗುತ್ತಾರೆ.

ಇದಕ್ಕೆ ಅವರ ಜೀವನದಿಂದ ಕೆಲವು ನಿದರ್ಶನಗಳನ್ನು ಉದಾಹರಿಸಬಹುದು: ಮುಂದೆ ಉತ್ಕೃಷ್ಟ ಕಲಾವಿದನಾಗಿ ವಿಕಾಸಗೊಳ್ಳುವ ಲಕ್ಷಣ ಮೊಳಕೆಯಲ್ಲೆ ಕಾಣುತ್ತದೆ, ಎಳೆಯ ವಯಸ್ಸಿನಲ್ಲಿಯೆ ವ್ಯಕ್ತವಾದ ಹಿತವಾದ, ಉತ್ಸಾಹದಾಯಕ ವಾದ ಸ್ನೇಹಕಲೆಯಲ್ಲಿ. ಐದು ವರ್ಷದ ಪುಟ್ಟ ಬಾಲಕ, ಗದಾಧರ ಶಾಲೆಯಲ್ಲಿ ಎಲ್ಲರಿಗೂ ಅಚ್ಚುಮೆಚ್ಚು. ಹೇಳಿ ಕೊಟ್ಟುದನ್ನು ಬಹುಬೇಗ ಕಲಿಯುತ್ತಾನೆಂದು ಗುರುಗಳಿಗೆ, ಪ್ರೀತಿ-ಸ್ನೇಹ ತುಂಬಿದ ಸಹಪಾಠಿಯಾಗಿ ಜೊತೆಯ ಬಾಲಕರಿಗೆ, ಗದಾಧರನೆಂದರೆ ತುಂಬಾ ಮೆಚ್ಚುಗೆ. ಪಾಠವೆಂದರೆ ಬೇಸರ, ಶಾಲೆಯೆಂದರೆ ಶಿಕ್ಷೆ ಎಂದು ಗೋಳಿಡುತ್ತಿದ್ದ ಮಕ್ಕಳೆಲ್ಲ ಗದಾಧರನ ಜೊತೆಗಿರುವ ಸಂತೋಷಕ್ಕಾಗಿ ಶಾಲೆಗೆ ತಪ್ಪದೆ ಬರತೊಡಗಿದರು. ಆತನಿದ್ದರೆ ಸಾಕು ಶಾಲಾಜೀವನ ಸದಾ ರುಚಿಕರ. ಗದಾಧರ ಮಣ್ಣಿನಲ್ಲಿ ಸುಂದರವಾದ ದೇವ-ದೇವಿಯರ ಮೂರ್ತಿಗಳನ್ನು ಮಾಡುವನು. ಉತ್ಸಾಹಿತ ಹುಡುಗರು ಸಹಾಯಕ್ಕೆ ನಿಲ್ಲುವರು. ಮರಗಳ ನೆರಳಲ್ಲಿ ಪುಟ್ಟ ಮಂಟಪ ಕಟ್ಟಿ ದೇವರನ್ನು ಕೂಡಿಸುವನು. ಮಕ್ಕಳೆಲ್ಲ ಹೂವು-ಎಲೆಗಳನ್ನು ಆಯ್ದು ತಂದು ಅಲಂಕರಿಸುವರು. ಗದಾಧರನ ಇಂಪಾದ ಕಂಠದಿಂದ ಹೊಮ್ಮುತ್ತಿದ್ದ ಹಾಡುಗಳನ್ನು ಕೇಳುತ್ತ ಎಲ್ಲರೂ ಮೈಮರೆಯುವರು. ಆತ ಹೇಳಿಕೊಟ್ಟ ಹಾಗೆ ಎಲ್ಲರೂ ಸೇರಿ ಹಾಡುವರು, ಕುಣಿಯುವರು. ಈ ಆಟಗಳಲ್ಲಿ ಕಾಲ ಕಳೆದುದೇ ಗೊತ್ತಾಗುತ್ತಿರಲಿಲ್ಲ.

ಕೊಂಚ ದೊಡ್ಡವನಾಗುತ್ತ ಗದಾಧರ ಏಕಾಂತಪ್ರಿಯನಾಗ ತೊಡಗಿದ. ಬಾಲಕನಲ್ಲಿ ಮಲಗಿದ್ದ ಕಲೋಪಾಸಕನೂ ಮೆಲ್ಲಮೆಲ್ಲನೆ ಕಣ್ತೆರೆಯತೊಡಗಿದನು. ಹಸಿರುಗದ್ದೆ, ಹೊಳೆ, ನಾಲೆಗಳಲ್ಲಿ ಜುಳಜುಳನೆ ಹರಿವ ನೀರಿನ ಸದ್ದು, ಪಕ್ಷಿಗಳ ಸುಮಧುರ ಗಾನ, ಜಗನ್ಮಾತೆಯನ್ನೇ ನೋಡಿದಂತೆ ಅನಿಸುವ ಸುನೀಲ ಆಕಾಶ, ಕ್ಷಣಕ್ಷಣಕ್ಕೂ ಬಗೆಬಗೆಯ ಆಕಾರಗಳಾಗಿ ಬದಲಾಗುತ್ತ ಚಲಿಸುವ ಬಣ್ಣಬಣ್ಣದ ಮೋಡಗಳ ಮೋಹಕ ನೋಟ, ರಾತ್ರಿಯಲ್ಲಿ ಹೊಳೆಹೊಳೆವ ಅಗಣಿತ ನಕ್ಷತ್ರಗಳು, ಬೆಳಗು-ಬೈಗುಗಳ ದಿನಕ್ಕೊಂದು ಬಗೆಯ ಚೆಲುವು ಬಾಲಕನ ಮನಸ್ಸನ್ನು ಸೆರೆಹಿಡಿಯುವುವು, ಭಾವರಾಜ್ಯದ ಅನಿರ್ವಚನೀಯ ಆನಂದದಲ್ಲಿ ಮುಳುಗಿಸುವುವು. ಕವಿಗಳು ಹೇಳುವಂತೆ, "ಕಲೆ ನಿಸ್ಸೀಮ ನೆಲೆಗೆ ಹೆಬ್ಬಾಗಿಲು" ; "ಸೌಂದರ್ಯವೇ ಕಲೆ, ಸತ್ಯದ ನೆಲೆ, ಮಂಗಳಮಯ ಶಿವದ ಸೆಲೆ"; "ಸತ್ಯಂ-ಶಿವಂ-ಸುಂದರಂ." ಇದು ಭಗವತ್‌ಸ್ವರೂಪ, ಭಗವತ್ಕೃಪೆ! ಶ್ರೀರಾಮಕೃಷ್ಣರು ಭಗವತ್ಸಾಕ್ಷಾತ್ಕಾರ ಮಾಡಿಕೊಳ್ಳುವುದಕ್ಕೆ ಈ ಎಳೆಯತನದ ಪ್ರಕೃತಿಪ್ರೇಮ, ಸೌಂದರ್ಯಪ್ರಜ್ಞೆ, ಕಲಾಭಿರುಚಿ ಮುನ್ಸೂಚನೆಗಳಾದುವು.

ಆಷಾಢದ ಒಂದುದಿನ ಆರು ವರ್ಷದ ಗದಾಧರ ಜೇಬಿನಲ್ಲಿ ತುಂಬಿಕೊಂಡಿದ್ದ ಹುರಿಗಡಲೆಯನ್ನು ಆಗಾಗ ತೆಗೆತೆಗೆದು ಮೆಲ್ಲುತ್ತ ಹುಲುಸಾದ ಹಸಿರುಗದ್ದೆಗಳ ನಡುವೆ ಬದುವಿನ ಕಾಲುದಾರಿಯಲ್ಲಿ ಹೋಗುತ್ತಿದ್ದ. ಹಾಗೆಯೇ ಆಕಾಶದ ಕಡೆ ಸಹಜವಾಗಿ ನೋಡಿದ. ಭಾರೀ ಮೋಡವೊಂದು ಗಗನದಗಲಕ್ಕೂ ಹರಡಿ ಕವಿಯಿತು. ಕಪ್ಪಾದ ಮೋಡದ ಹಿನ್ನೆಲೆಯಲ್ಲಿ ಬೆಳ್ಳಕ್ಕಿಗಳ ಸಾಲು ಸುಂದರವಾದ ರೇಖಾವಿನ್ಯಾಸದಲ್ಲಿ ಹಾರುತ್ತ ಹೋಗುತ್ತಿರುವುದು ಕಂಡಿತು. ಅದನ್ನು ನೋಡುತ್ತ ಗದಾಧರ ಭಾವಪರವಶನಾಗಿ ಪ್ರಜ್ಞೆತಪ್ಪಿ ಬಿದ್ದುಬಿಟ್ಟ. ಕಡಲೆಯೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದುಹೋದುದರ ಪರಿವೆಯಿಲ್ಲ. ಮೈತಿಳಿದು ಎಚ್ಚರವಾದಾಗ ಮನೆಯಲ್ಲಿದ್ದ. ಮಲಗಿಸಿದ್ದರು. ಸುತ್ತ ಎಲ್ಲರೂ ಗಾಬರಿಯಾಗಿ ನಿಂತಿದ್ದರು. ಆಗಲೂ ಆತನ ಮನಸ್ಸು ಅದೇ ಆನಂದದಿಂದ ತುಂಬಿತ್ತು.

ಇದು ಭಾವಸಮಾಧಿಯ ಮೊದಲ ಅನುಭವ. ಶ್ರೀರಾಮಕೃಷ್ಣರ ಸತ್ಯಸಾಕ್ಷಾತ್ಕಾರಕ್ಕೆ ನಾಂದಿಯಾದ ದಿವ್ಯಾನುಭವ. ಈ ಅನುಭವಕ್ಕೆ ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ!

**"Beauty is Truth, Truth Beauty,"**
**That is all. Ye know on earth;**
**That is all ye need to know.(—*Keats*)**

ಶಿವರಾತ್ರಿಯ ದಿನ ಕಾಮಾರಪುಕುರದಲ್ಲಿ ಸಂಭ್ರಮವೇ ಸಂಭ್ರಮ! ಮನೆಮನೆಯ ಬಾಗಿಲಲ್ಲಿ ತಳಿರ ತೋರಣ. ದೇಗುಲದಲ್ಲಿ ಶಿವನಿಗೆ ಅಭಿಷೇಕ, ಶಿವನಾಮ ಸಂಕೀರ್ತನೆ. ರಾತ್ರಿ ಜಾಗರಣೆ. ವಾಡಿಕೆಯಂತೆ ಇಡೀ ರಾತ್ರಿ ಒಂದು ಭಕ್ತಿ ಕತೆಯ ನಾಟಕ. ಅದರಲ್ಲಿ ಶಿವನ ಪಾತ್ರವನ್ನು ವಹಿಸುವುದಕ್ಕೆ ಗೊತ್ತುಮಾಡಿದ ವ್ಯಕ್ತಿ ಇದ್ದಕ್ಕಿದ್ದಂತೆ ಅಸ್ವಸ್ಥನಾಗಿ ಆ ಪಾತ್ರವನ್ನು ವಹಿಸಲು ಗದಾಧರನನ್ನೇ ಒತ್ತಾಯಿಸಿ ಒಪ್ಪಿಸಿದರು. ಗದಾಧರ ಜಟಾಧಾರಿಯಾಗಿ ತ್ರಿಪುಂಡ್ರಭಸ್ಮಧರಿಸಿ, ಕೊರಳಲ್ಲಿ, ಮುಂಗೈ ಮತ್ತು ತೋಳುಗಳಿಗೆ ರುದ್ರಾಕ್ಷಿಮಾಲೆ ಹಾಕಿಕೊಂಡು ತ್ರಿಶೂಲ ಹಿಡಿದು ರಂಗದ ಮೇಲೆ ಬಂದಾಗ ಸಾಕ್ಷಾತ್ ಶಿವನೇ ಬಂದಹಾಗಾಯಿತು. ಪ್ರೇಕ್ಷಕರು ಶಿವನನ್ನೇ ಕಂಡ ಸಂತೋಷದಲ್ಲಿ ಮೈಮರೆತುದು ಹಾಗಿರಲಿ, ಗದಾಧರ ಪಾತ್ರ ವಹಿಸಿರುವುದನ್ನೇ ಮರೆತು ತಾನೇ ಶಿವ ಎಂಬ ಭಾವದಲ್ಲಿ ತನ್ಮಯನಾಗಿ ನಿಷ್ಪಂದನಾಗಿ ಪ್ರತಿಮೆಯಂತೆ ನಿಂತುಬಿಟ್ಟ! ಕಣ್ಣುಗಳಲ್ಲಿ ಅಶ್ರುಧಾರೆ! ಬಾಹ್ಯಪ್ರಜ್ಞೆಯೇ ಇಲ್ಲ. ನಾಟಕ ಅಲ್ಲಿಗೇ ನಿಂತು ಹೋಯಿತೆಂದು ಬೇರೆ ಹೇಳಬೇಕಾಗಿಲ್ಲ. ನಾಟಕ ನಿಂತು ಹೋಯಿತೆಂದು ಯಾರಿಗೂ ನಿರಾಸೆಯಾಗಲಿಲ್ಲ, ಬೇಸರವೂ ಆಗಲಿಲ್ಲ. ಶಿವರಾತ್ರಿಯಂದು ಸಾಕ್ಷಾತ್ ಶಿವನ ದರ್ಶನವೇ ಆಯಿತೆಂದು ಪ್ರೇಕ್ಷಕರೆಲ್ಲರೂ ಸಂತೋಷಪಟ್ಟರು. ಗದಾ

ಧರನನ್ನು ಕೊಂಡಾಡುತ್ತ ತಮ್ಮ ಮನೆಗಳಿಗೆ ಹಿಂತಿರುಗಿದರು.

೧೮೫೫ರಲ್ಲಿ ಗದಾಧರನು ದಕ್ಷಿಣೇಶ್ವರದ ಕಾಳಿ ದೇವಸ್ಥಾನದಲ್ಲಿ ಅರ್ಚಕನಾಗಿ ಪೂಜೆ ಮಾಡಲು ಒಪ್ಪಲೇಬೇಕಾಯಿತು. ಜಗನ್ಮಾತೆಯ ಪ್ರತ್ಯಕ್ಷದರ್ಶನಕ್ಕಾಗಿ ತೀವ್ರವಾಗಿ ಹಂಬಲಿಸುತ್ತ ಅತ್ಯಂತ ಉತ್ಕಟ ವ್ಯಾಕುಲತೆಯಿಂದ ಬೇಡುತ್ತ ಕಣ್ಣೀರುಗರೆಯುವುದೇ ದಿನಚರಿಯಾಯಿತು. ಅದೊಂದು ಅಮೋಘವಾದ ಸಾಧನೆ. ಅಂತೂ ಆ ಉತ್ಕಟವಾದ ಸಾಧನೆಗೆ ಫಲ ದೊರೆಯಿತು. ಕರುಣಾಮಯಿ ಭವತಾರಿಣಿಯ ಸಾಕ್ಷಾತ್ಕಾರವಾದ ಮೇಲೆ ಭೈರವಿ ಬ್ರಾಹ್ಮಣಿ ಮತ್ತು ತೋತಾಪುರಿಯವರುಗಳ ಮಾರ್ಗದರ್ಶನದಲ್ಲಿ ಸಾಕಾರ, ನಿರಾಕಾರ ಭಗವತ್‌ತತ್ತ್ವವನ್ನು ಭಕ್ತಿ, ಜ್ಞಾನಮಾರ್ಗಸಾಧನೆಗಳಿಂದ ಆತ್ಮಗತ ಮಾಡಿಕೊಂಡ ಬಳಿಕ, ಎಲ್ಲ ಬಗೆಯ ಮತ್ತು ಇತರ ಎಲ್ಲ ಧರ್ಮಗಳ ಸಾಧನೆಗಳನ್ನೂ ಮಾಡಿ ದಿವ್ಯಾನುಭೂತಿಗಳನ್ನು ಪಡೆದರು.

ಇರುವ ಏಕೈಕ ಸತ್ಯ, ಸಮಸ್ತ ವಿಶ್ವಕ್ಕೂ ಕಾರಣವಾದ ಮತ್ತು ಎಲ್ಲವನ್ನೂ ನಿಯಂತ್ರಿಸುತ್ತಿರುವ ಚೈತನ್ಯ, ಒಂದೇ ಎಂದು ಅರಿತು, ಪ್ರಯೋಗಪೂರ್ವಕವಾಗಿ, ತೋರಿಸಿದ ಈ ಪರಮಹಂಸ ಶ್ರೀಗುರುಗಳ ಬಳಿಗೆ ಮಹೇಂದ್ರನಾಥ ಗುಪ್ತ, ರಾಖಾಲ, ನರೇಂದ್ರ ಮುಂತಾದ ಅನೇಕ ಸತ್ಯಾನ್ವೇಷಕರು ಬರತೊಡಗಿದ ಅವಧಿಯಲ್ಲಿ ಶ್ರೀರಾಮಕೃಷ್ಣರ ಭಕ್ತಿ ಗಾಯನ ಕಲಾಪ್ರತಿಭೆ ಪೂರ್ಣ ಪ್ರಕಾಶದಿಂದ ಬೆಳಗಿತು. ವಂಗದೇಶದ ಚೈತನ್ಯ ಪ್ರಭು, ರಾಮಪ್ರಸಾದ, ಕಮಲಾಕಾಂತ ಮೊದಲಾದ ಹೆಸರಾಂತ ಭಕ್ತಕವಿಗಳ ಕೀರ್ತನೆಗಳನ್ನು ಹಾಡಿ, ಹಾಡಿಸಿ ಹರ್ಷದಲ್ಲಿ ಮೈಮರೆಯುವರು. ತಮ್ಮ ಮಧುರವಾದ ಕಂಠದಿಂದ ಭಕ್ತಿ ಪರವಶರಾಗಿ ಹಾಡುತ್ತಿದ್ದ ರಾಮಕೃಷ್ಣರ ಹಾಡುಗಳನ್ನು ಕೇಳಿದವರು ಆನಂದತುಂದಿಲರಾಗಿ ಭಕ್ತಿಭಾವಪರವಶರಾಗುವರು. ದಕ್ಷಿಣೇಶ್ವರದ ಅವರ ಕೊಠಡಿಯಾಗಬಹುದು, ಇಲ್ಲ ಅವರನ್ನು ಬರಮಾಡಿಕೊಳ್ಳುತ್ತಿದ್ದ ಬಲರಾಮ ಬಸು ಮುಂತಾದ ಭಕ್ತರ ಮನೆಗಳಾಗಬಹುದು, ಠಾಕೂರರಿದ್ದ ಕಡೆ ಭಕ್ತಿಗೀತೆ—ಸಂಕೀರ್ತನೆಗಳ ಗೋಷ್ಠಿ ಇದ್ದೇ ಇರುವುದು. ನರೇಂದ್ರ ಮುಂತಾಗಿ ಸೊಗಸಾಗಿ ಹಾಡಬಲ್ಲವರು, ಹಾಗೆಯೆ ಸ್ವತಃ ರಾಮಕೃಷ್ಣರು, ಹಾಡುವರು. ಸ್ವಾರಸ್ಯವಾದ, ಹಾಸ್ಯಲೇಪಿತ, ದೃಷ್ಟಾಂತಕತೆಗಳ ಸಹಿತವಾದ ಅಧ್ಯಾತ್ಮವಿಚಾರದ ಮಾತು-ಕತೆಗಳ ನಡುವೆ ಹೊಮ್ಮುತ್ತಿದ್ದ ಅರ್ಥವತ್ತಾದ ಭಕ್ತಿಗೀತೆಗಳ ಸುಮಧುರ ಸುಧೆಯೇ ಹರಿಯುವುದು. ಹಾಡುತ್ತಾ ಇಲ್ಲವೆ ಹಾಡುಗಳನ್ನು ಕೇಳುತ್ತ ಶ್ರೀರಾಮಕೃಷ್ಣರು ದಿವ್ಯವಾದ, ಉನ್ನತ ಹಾಗೂ ಉನ್ಮತ್ತ ಭಾವದಲ್ಲಿ ತನ್ಮಯರಾಗಿ ಭಾವಸಮಾಧಿಯಲ್ಲಿ ನಿಂತೇ ಬಿಡುವರು. ಕೆಲವೊಮ್ಮೆ ಹರ್ಷಾತಿಶಯದಿಂದ ನರ್ತಿಸತೊಡಗುವರು. ಅದೆಲ್ಲ ಒಂದೊಂದೂ ಅಲೌಕಿಕ ನೋಟ! ಉನ್ನತ ಆತ್ಮಸ್ತರಕ್ಕೊಯ್ಯುವ ಶ್ರೇಷ್ಠತಮ ಗಾಯನ-ನರ್ತನ ಕಲಾವೈಭವ!

**ಗಹನವಾದ ದಿವ್ಯಾನುಭವ ಸ್ಥಿತಿಗೆ ಕ್ಷಣಾರ್ಧದಲ್ಲಿ ಹೋಗಬಲ್ಲ ಇವರು ಸಾಧಾರಣ ಸ್ಥಿತಿಯಲ್ಲಿ ಸಹಜವಾಗಿ ವಿನೋದಶೀಲರು.**

ಈ ಔನ್ನತ್ಯ ಒಂದು ಕಡೆ. ಸಾಧಾರಣ ಸ್ಥಿತಿಯಲ್ಲಿ ಶ್ರೀರಾಮಕೃಷ್ಣರ ಅದ್ಭುತವಾದ ವ್ಯಾವಹಾರಿಕ ತಿಳಿವಳಿಕೆ, ಮುಗ್ಧವಾದ ಮಗುವಿನ ಮನಸ್ಸು, ಜೀವನೋತ್ಸಾಹ, ಲವಲವಿಕೆ ಗಮನವನ್ನು ಸೆಳೆಯುವಂತಹವು. ಗಹನವಾದ ದಿವ್ಯಾನುಭವ ಸ್ಥಿತಿಗೆ ಕ್ಷಣಾರ್ಧದಲ್ಲಿ ಹೋಗಬಲ್ಲ ಇವರು ಸಾಧಾರಣ ಸ್ಥಿತಿಯಲ್ಲಿ ಸಹಜವಾಗಿ ವಿನೋದಶೀಲರು.

ಹಾಡಿದರೆ ಶ್ರುತಿಬದ್ಧವಾಗಿ ಸುಶ್ರಾವ್ಯವಾಗಿ ಹಾಡಬೇಕೆನ್ನುವ ನರೇಂದ್ರ ತಂಬೂರಿಯನ್ನು ಶ್ರುತಿ ಮಾಡುವುದರಲ್ಲಿ ಸ್ವಲ್ಪ ಹೆಚ್ಚು ಹೊತ್ತು ನಿರತನಾದರೆ, "ಸರಿಹೋಯಿತು, ಹೀಗೆ ಇಡೀ ದಿನ ಶ್ರುತಿ ಮಾಡುವುದರಲ್ಲೇ ಕಳೆದರೆ ಹಾಡುವುದು ಯಾವಾಗ?" ಎಂದು ಶ್ರೀರಾಮಕೃಷ್ಣರು ನಗೆಯಾಡುವರು.

ಮದುವೆಯಾದ ಸಂದರ್ಭದಲ್ಲಿ ನಡೆದ ಒಂದು ಸಂಗತಿ ಉಲ್ಲೇಖನಾರ್ಹವಾಗಿದೆ. ಗದಾಧರನ ಮನೆಯವರು ಹಣವಂತರೇನಲ್ಲ. ಮದುವೆ ಪೂರ್ತಿಗಾಗಿ ನೆರೆಯ ಸಾಹುಕಾರ ಕುಟುಂಬದಿಂದ ಆಭರಣಗಳನ್ನು ಎರವಲು ತಂದು ವಧುವಿಗೆ ಹಾಕಿದ್ದರು. ಶಾರದಾಮಣಿ ಮುಗ್ಧಳಾದ ಚಿಕ್ಕಹುಡುಗಿ. ಒಡವೆಗಳನ್ನೆಲ್ಲ ಹಾಕಿಕೊಂಡು ಬಹಳ ಖುಷಿಯಾಗಿದ್ದಳು. ಆಕೆಯ ಕಡೆಯವರೂ ಅವು ಗದಾಧರನ ಮನೆಯ ಸ್ವಂತದ ಒಡವೆಗಳೆಂದೇ ಭಾವಿಸಿ ಖುಷಿಯಾಗಿದ್ದರು. ಮದುವೆಯಾದ ಮರುದಿನ ಒಡವೆಗಳನ್ನು ಹಿಂತಿರುಗಿಸುವ ಮಾತಾಗಿತ್ತು. ಅವೆಲ್ಲ ತನ್ನವೇ ಎಂದುಕೊಂಡಿದ್ದ ಪುಟ್ಟಶಾರದೆ ಒಡವೆಗಳನ್ನು ಬಿಚ್ಚಿಕೊಡುವಂತಿರಲಿಲ್ಲ. ಗದಾಧರನೆ ರಾತ್ರಿ ಆಕೆ ಮಲಗಿದ್ದಾಗ ಗೊತ್ತಾಗದ ಹಾಗೆ ಅವುಗಳನ್ನು ಕಳಚಿ ತೆಗೆದು ತನ್ನ ತಾಯಿಯ ಕೈಗೆ ಕೊಟ್ಟ. ಅವುಗಳನ್ನೆಲ್ಲ ಹಿಂತಿರುಗಿಸಿದರು. ಎಚ್ಚರವಾದ ಮೇಲೆ ತನ್ನ ಮೈಕೈ ನೋಡಿಕೊಂಡ ಬಾಲಿಕೆ ಒಡವೆಗಳೆಲ್ಲ ಮಾಯವಾಗಿದ್ದುದನ್ನು ಕಂಡು ಅತ್ತಳು. ಅತ್ತೆ, "ಹೋದರೆ ಹೋಗಲಿ ಬಿಡಮ್ಮಾ, ನಮ್ಮ ಗದಾಯ್ ಅವಕ್ಕಿಂತಲೂ ಸುಂದರವಾದ ಒಡವೆ ಮಾಡಿಸಿಕೊಡುತ್ತಾನೆ," ಎಂದು ಸಂತೈಸಿದರೂ ಶಾರದೆ ಸುಮ್ಮನಾಗಲಿಲ್ಲ. ಹೆಣ್ಣಿನ ಚಿಕ್ಕಪ್ಪ ಕೋಪಿಸಿಕೊಂಡು ಮಗು ಶಾರದೆಯನ್ನು ಕರೆದುಕೊಂಡು ಜಯರಾಮಬಾಟಿಗೆ ಹೊರಟುಹೋದರು. ಗಂಡಿನ ತಾಯಿ ಚಂದ್ರಮಣಿದೇವಿ ಖಿನ್ನರಾಗಿ ಕುಳಿತರು. ಗದಾಧರ ಸ್ವಲ್ಪವೂ ವಿಚಲಿತನಾಗದೆ ನಗುತ್ತ ಬಂದು ತಾಯ ಬಳಿ ಕುಳಿತು, "ಬಿಡಮ್ಮಾ. ಅವರೀಗ ಏನು ಮಾಡಿದರೇನು. ಆದ ಮದುವೆಯನ್ನು ತಪ್ಪಿಸಲಾಗುವುದೇ?" ಎಂದು ತಮಾಷೆ ಮಾಡಿ ಸಂತೈಸಿದರು. ಮ್ಲಾನವಾಗಿದ್ದ ಮನೆ ಮತ್ತೆ ಹರ್ಷಗೊಂಡು ಬೆಳಗಿತು.

ಒಂದು ಸಲ ರಾಮಕೃಷ್ಣರು ಮುಗ್ಧಬಾಲಕನಂತೆ, "ನನಗೆ

ಅದನ್ನು ತಂದುಕೊಡ್ತೀಯಾ?" ಎಂದು ಅಶ್ವಿನಿಕುಮಾರನನ್ನು ಕೇಳಿದರು. "ಯಾವುದನ್ನ?" ಎಂದು ಕೇಳಿದ ಆತ ಹಿಂದೆ-ಮುಂದೆ ಯಾವುದೂ ತಿಳಿಯದೆ.. "ಅರ್ಧ ಹುಳಿ, ಅರ್ಧ ಸಿಹಿ ಆಗಿರುತ್ತಲ್ಲ ಅದು." ಆಗಲೂ ಅಶ್ವಿನಿಗೆ ಅರ್ಥವಾಗಲಿಲ್ಲ. "ಏನಪ್ಪಾ ಅದು!" ಎನ್ನುತ್ತಾ ಕಣ್ಣು ಹೊರಳಿಸಿ ಯೋಚಿಸ ತೊಡಗಿದ.

"ಅದೇ, ಅಮುಕಿದರೆ ಗೋಲಿ ಕೆಳಕ್ಕೆ ಹೋಗಿ ಭುಸ್ ಎಂದು ಬುರುಗು ಬರುತ್ತಲ್ಲ. ಬಣ್ಣ ಬಣ್ಣದ ನೀರಿರುತ್ತಲ್ಲ."

"ಓ, ಲೆಮನೇಡೇ?"

"ಏನೋ. ಅದನ್ನು ತಂದುಕೊಡುತ್ತೀಯಾ?"

"ಆಗಲಿ," ಎಂದವನು ಸಾಧು ಆದವರು ಲೆಮನೇಡ್ ಕುಡೀತಾರೆಯೆ ಎಂದು ಅನುಮಾನವಾಗಿ, "ನೀವು ಜಾತಿ, ಮಡಿ ಅಂತ ಇಟ್ಟುಕೊಂಡಿದ್ದೀರಾ?" ಎಂದು ಕೇಳಿದ. ಅದಕ್ಕೆ ರಾಮಕೃಷ್ಣರು, "ಏನೋ ಸ್ವಲ್ಪ ಸ್ವಲ್ಪ ಇದೆ. ಜಂಭ ಕೊಚ್ಚಿಕೊಳ್ಳುವಷ್ಟು ಅಲ್ಲ. ಕೇಶವನ ಮನೇಲಿ ಊಟ ಮಾಡಿದ್ದೇನೆ. ಗಡ್ಡದವನು (ಮುಸಲ್ಮಾನ) ಕೊಟ್ಟ ಐಸ್ ತಿಂದಿದ್ದೇನೆ. ಏನು ಮಾಡುವುದು ಹೇಳು. ತೆಂಗಿನ ಮರ ಬೆಳೆದಂತೆಲ್ಲ ಹೆಡಲು ಗರಿಗಳು ಉದುರಿ ಹೋಗುತ್ತವೆ. ಈ ನೇಮಗಳೂ ಅಷ್ಟೆ," ಎಂದರು. ಅಲ್ಲಿದ್ದವರಿಗೆಲ್ಲ ನಗು ತಡೆಯಲಾಗಲಿಲ್ಲ. ಜೊತೆಗೆ ರಾಮಕೃಷ್ಣರೂ ನಗತೊಡಗಿದರು.

ಪರಮಹಂಸರು ಮೊದಲಬಾರಿಗೆ ಕೇಶವಚಂದ್ರಸೇನನ ಬ್ರಹ್ಮಸಮಾಜಕ್ಕೆ ಹೋದಾಗ ಅದೂ ಇದೂ ಆಧ್ಯಾತ್ಮಿಕವಾದ ಮಾತುಗಳಾದ ಮೇಲೆ ಆಚಾರ್ಯನು, "ಧ್ಯಾನ ಮಾಡೋಣ," ಎಂದ. ಅಲ್ಲಿದ್ದ ಶಿಷ್ಯರೆಲ್ಲ ಕಣ್ಣುಮುಚ್ಚಿ ಕುಳಿತರು. ಅವರೆಲ್ಲ ಬಹಳ ಹೊತ್ತು ಧ್ಯಾನಮಗ್ನರಾಗಿರುತ್ತಾರೆಂದು ತಿಳಿದಿದ್ದ ರಾಮಕೃಷ್ಣರಿಗೆ, ನಾಲ್ಕೈದು ನಿಮಿಷಗಳಲ್ಲೆ ಎಲ್ಲರೂ ಕಣ್ತೆರೆದು ಮಾತಾಡತೊಡಗಿದ್ದನ್ನು ನೋಡಿ ಆಶ್ಚರ್ಯವಾಯಿತು. ಎಲ್ಲರೂ ಹೋದಮೇಲೆ ಕೇಶವ ಕೇಳಿದ : "ನಿಮಗೆ ಹೇಗೆ ಅನಿಸಿತು?" ಪರಮಹಂಸರು, "ಯಾವುದರ ಬಗ್ಗೆ? ಧ್ಯಾನದ ಬಗ್ಗೇನಾ? ಎಲ್ಲರೂ ಕಣ್ಣುಮುಚ್ಚಿ ಕುಳಿತಾಗ ನನಗೇನು ನೆನಪಿಗೆ ಬಂತು ಗೊತ್ತಾ? ದಕ್ಷಿಣೇಶ್ವರದ ತೋಟದಲ್ಲಿ ಕೆಲವು ಸಲ ನೂರಾರು ಕಪಿಗಳು ಮರದ ಮೇಲೆ ನಿಶ್ಚಲವಾಗಿ ಕೂತಿರುತ್ತವೆ. ಇನ್ನು ಸ್ವಲ್ಪ ಹೊತ್ತಿನ ನಂತರ ಯಾವ ತೋಟದ ಯಾವ ಹಣ್ಣಿನ ಮರಗಳಿಗೆ ಲಗ್ಗೆ ಹಾಕಬೇಕು ಎಂದು ಯೋಚಿಸುತ್ತಿರುತ್ತವೆ. ನಿನ್ನ ಈ ಶಿಷ್ಯರ ಧ್ಯಾನ ಅದಕ್ಕಿಂತ ಹೆಚ್ಚು ವಿಶೇಷವಾಗಿತ್ತೆಂದು ತೋರಲಿಲ್ಲ"ಎಂದುಬಿಡುವುದೆ ! ಇನ್ನೊಂದು ಸಲ ಬ್ರಹ್ಮಸಮಾಜದಲ್ಲಿ, "ಸರ್ವದಾ ಈಶ್ವರ ಧ್ಯಾನ ಮಾಡುತ್ತಿರಬೇಕು," ಎಂಬರ್ಥದ ಗೀತೆಯನ್ನು ಹಾಡುತ್ತಿದ್ದರು. ಪರಮಹಂಸರು ನಡುವೆ ಬಾಯಿ ಹಾಕಿ, "ಈಶ್ವರನೊಡನೆ ಈ ನಾಟಕ ಏಕೆ? ನೀವು ವಾಸ್ತವವಾಗಿ ದಿನವೂ ಏನು ಮಾಡುತ್ತಿದ್ದೀರೊ ಅದನ್ನೇ ಹೇಳಿ—ಎರಡೇ ಸಾರಿ ಧ್ಯಾನ ಮಾಡಿ ಎಂದು," ಅನ್ನುವುದೆ!

**ಸಮತ್ವದ, ಸಮಚಿತ್ತದ, ಸಮದರ್ಶಿತ್ವದ ಮನೋಧರ್ಮವನ್ನು ಬೆಳೆಸಿಕೊಂಡು ಬಾಳುವುದೇ ಜೀವನಕಲೆ.**

ಶ್ರೇಷ್ಠ ಹಾಸ್ಯಕಲೆಗೆ ಉದಾಹರಿಸಬಹುದಾದ ಇಂಥಾ ಅನೇಕ ಪ್ರಸಂಗಗಳನ್ನು ಶ್ರೀರಾಮಕೃಷ್ಣರ ಜೀವನದಲ್ಲಿ ಕಾಣಬಹುದು. ಕೆಲವನ್ನು ಮಾತ್ರ ಇಲ್ಲಿ ನೆನಪಿಸಲಾಗಿದೆ. ಜಗನ್ಮಾತೆಯ ಸ್ಮರಣೆ, ಪೂಜೆ, ಧ್ಯಾನ, ಭಜನೆ—ಹೀಗೆ ದೈವ ಚಿಂತನೆಯಲ್ಲೇ ಹೆಚ್ಚು ಕಾಲ ಮುಳುಗಿರುತ್ತಿದ್ದ ರಾಮಕೃಷ್ಣರಿಗೆ ಪ್ರಾಪಂಚಿಕ ವ್ಯವಹಾರ ಜಗತ್ತಿನಲ್ಲಿ ಏನು ನಡೆಯುತ್ತಿರುತ್ತದೆ, ಹೇಗೆ ಇರಬೇಕು ಎಂಬುದೆಲ್ಲ ಅದು ಹೇಗೆ ತಿಳಿಯುತ್ತಿತ್ತೋ, ಆಶ್ಚರ್ಯ. ಅಲ್ಲಿ ಇಲ್ಲಿ ದೇವಸ್ಥಾನಗಳಲ್ಲಿ ಪುರಾಣ-ಪುಣ್ಯ ಕಥಾ ಕಾಲಕ್ಷೇಪಗಳಿಗೆಂದು ಸೇರುತ್ತಿದ್ದ ಹೆಂಗಳೆಯರು ತಮ್ಮ ತಮ್ಮ ಮನೆಗಳ ತಾಪತ್ರಯಗಳನ್ನೊ, ಇಲ್ಲ ಅವರಿವರ ಕುಟುಂಬಗಳ ರೋಚಕ ವಿಷಯಗಳನ್ನು ಕುರಿತು ಉಪ್ಪು-ಖಾರ ಹಚ್ಚಿ ಹೇಳುತ್ತಾ, ಆಡಿಕೊಳ್ಳುತ್ತಾ ಇರುವ ಸಂಗತಿಗಳನ್ನು ಸುತ್ತ ಕುಳಿತ ಭಕ್ತರೆದುರು ಯಾವಾಗಲಾದರೊಮ್ಮೆ ಹೇಳುತ್ತ,"ಜಟಿಲ-ಕುಟಿಲೆಯರಿರಬೇಕು, ಆಗಲೇನೆ ಲೋಕದ ಬದುಕು ಸ್ವಾರಸ್ಯವಾಗಿರುತ್ತದೆ," ಎನ್ನುತ್ತಿದ್ದರು. ಬರೀ ಮಹಿಳೆಯರ ರೀತಿಗಳ ಬಗ್ಗೇನೆ ಅಲ್ಲ ಇತರ ಕೆಲವು ವ್ಯಕ್ತಿಗಳ (ಗಂಡಸರ) ವಿಲಕ್ಷಣ ಮಾತು ವರ್ತನೆಗಳನ್ನೂ ಭಾವ-ಅಭಿನಯ ಸಹಿತವಾಗಿ ಅನುಕರಣ ಮಾಡಿ ತೋರಿಸಿ ಎಲ್ಲರನ್ನೂ ನಗೆಗಡಲಿನಲ್ಲಿ ಮುಳುಗಿಸುತ್ತಿದ್ದರು. ಅದು ಶುದ್ಧವಾದ, ಯಾರನ್ನೂ ನೋಯಿಸದ ಹಾಸ್ಯ! ಮನೆಗೆ ಸಾಮಾನು, ತರಕಾರಿ ತರಲು ಬಜಾರಿಗೆ ಹೋಗುವವರಿಗೆ, "ನಾಲ್ಕು ಕಡೆ ಧಾರಣೆ ವಿಚಾರಿಸಿ, ವಸ್ತುಗಳ ಗುಣಮಟ್ಟವನ್ನೂ ಎಚ್ಚರಿಕೆಯಿಂದ ಪರೀಕ್ಷೆ ಮಾಡಿ, ದರದಲ್ಲಿ ಚೌಕಾಶಿ ಮಾಡಿ ಕೊಂಡುಕೊಳ್ಳಬೇಕು, ಇಲ್ಲವಾದರೆ ಟೋಪಿ ಹಾಕಿಬಿಡುತ್ತಾರೆ," ಎಂದು ಬುದ್ಧಿ ಹೇಳುವರು.

ಚೆನ್ನಾಗಿ ಬದುಕಬೇಕು. ಬದುಕನ್ನು ಪ್ರೀತಿಸಬೇಕು. ಬದುಕಿನಲ್ಲಿ ಉತ್ಸಾಹ ಇರಬೇಕು. ಸುಖ-ದುಃಖ, ನೋವು-ನಲಿವುಗಳನ್ನು ಸಮಭಾವದಿಂದ ಸ್ವೀಕರಿಸಬೇಕು. ಮನಸ್ಸಿನ ಪ್ರಸನ್ನತೆಯನ್ನು ಕಳೆದುಕೊಳ್ಳದ ತಿಳಿವಳಿಕೆ, ಒಳ್ಳೆಯ ಹಾಸ್ಯಪ್ರಜ್ಞೆ ಇರಬೇಕು. ಸಮತ್ವದ, ಸಮಚಿತ್ತದ, ಸಮದರ್ಶಿತ್ವದ ಮನೋಧರ್ಮವನ್ನು ಬೆಳೆಸಿಕೊಂಡು ಬಾಳುವುದೇ ಜೀವನ ಕಲೆ. ಅಂತಹ ಜೀವನಕಲೆ ಉಳಿದೆಲ್ಲ ಲಲಿತಕಲೆಗಳಿಗಿಂತ ಹೆಚ್ಚು ಅಮೂಲ್ಯವಾದುದು, ಪರಮಶ್ರೇಷ್ಠವಾದುದು. ಈ ಕಲೆಯಲ್ಲಿಯೂ ಆದರ್ಶಪ್ರಾಯರಾಗಿರುವ ಶ್ರೀರಾಮಕೃಷ್ಣರು ನಿಜಕ್ಕೂ ಉತ್ಕೃಷ್ಟ ಕಲಾವಿದರು. ✯